**File No: UDD/117/MNI/2020-BDA BANG-Urban Development Department**

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಬೆಂಗಳೂರು ಜಲಮಂಡಳಿಯಿಂದ ನಿಮ್ಹಾನ್ಸ್‌ನ ಕ್ಯಾಂಪಸ್ ಸಕಾಲವರ, ಬೆಂಗಳೂರು ದಕ್ಷಿಣ ಪ್ರದೇಶಕ್ಕೆ ನೀರು ಸರಬರಾಜು ಮಾಡುವ ಬಗ್ಗೆ.

**ಓದಲಾಗಿದೆ:** ಅಧ್ಯಕ್ಷರು, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಇವರ ಪತ್ರಗಳ ಸಂಖ್ಯೆ: ಬೆಂಜಮಂ/ಅ/ಪ್ರ.ಮು.ಅ/ಮುಅ(ಪೂ)/2445/2020-21 ದಿನಾಂಕ: 25.09.2020 ಮತ್ತು ಬೆಂಜಮಂ/ಅ/ಪ್ರ.ಮು.ಅ/ಮುಅ(ಪೂ)/ಅಮುಅ(ಪೂ)-2/ಉಮುಅ(ನಿ)-2/ತಾಸ(ನಿ)-3/3398/2020-21ದಿನಾಂಕ: 17.11.2020

****

**ಪ್ರಸ್ತಾವನೆ:**

ಅಧ್ಯಕ್ಷರು, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಇವರು ಮೇಲೆ ಓದಲಾದ ಪತ್ರಗಳಲ್ಲಿ ನಿರ್ದೇಶಕರು, ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರವಿಜ್ಞಾನ ಸಂಸ್ಥೆ (ನಿಮ್ಹಾನ್ಸ್)ನ ಇವರು ದಕ್ಷಿಣ ಬೆಂಗಳೂರು, ಸಕಾಲವರನಲ್ಲಿ ನಿರ್ಮಿಸಿರುವ ನಿಮ್ಹಾನ್ಸ್‌ನ ಹೆಲ್ತ್ ಕೇರ್ ಕೇಂದ್ರವು ಬನ್ನೇರುಘಟ್ಟ ರಸ್ತೆಯಿಂದ ಸುಮಾರು 2.8 ಕಿ.ಮೀ. ದೂರದಲ್ಲಿ ಒಟ್ಟು 12 ಎಕರೆ ವಿಸ್ತೀರ್ಣ ಪ್ರದೇಶದಲ್ಲಿ ನಿರ್ಮಿಸಿದ್ದು, ಈ ಹೆಲ್ತ್ ಕೇರ್ ಕೇಂದ್ರದಲ್ಲಿ ಸರಾಸರಿ 850 ಜನರಿಗೆ ಚಿಕಿತ್ಸೆ ನೀಡಲು ಉದ್ದೇಶಿಸಿರುವುದಾಗಿ ಹಾಗೂ ಅಷ್ಟು ಜನರಿಗೆ 1,20,000 ಲೀಟರ್ ನಷ್ಟು ಕುಡಿಯುವ ನೀರಿನ ಅವಶ್ಯಕತೆಯಿದ್ದು, ಕಾವೇರಿ ನೀರಿನ ವ್ಯವಸ್ಥೆ ಕಲ್ಪಿಸುವಂತೆ ಹಾಗೂ ಮುಂದಿನ 5 ವರ್ಷಗಳಲ್ಲಿ ನೂತನ ಕಟ್ಟಡಗಳನ್ನು ನಿರ್ಮಿಸಿ, ಈ ಸೇವೆಯನ್ನು ಇನ್ನು 900 ಜನರಿಗೆ ವಿಸ್ತರಿಸಲು ಯೋಜಿಸಲಾಗಿದ್ದು, ಅದಕ್ಕೂ ಸಹ ಪ್ರತಿನಿತ್ಯ 1,20,000 ಲೀಟರ್ ರಷ್ಟು ನೀರು ಬೇಕಾಗಿರುತ್ತದೆ. ಈ ಕಾಮಗಾರಿ ಯೋಜನೆಗೆ ತಗಲುವ ವೆಚ್ಚವನ್ನು ಇಲಾಖಾವತಿಯಿಂದ ಭರಿಸುವುದಾಗಿ ತಿಳಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ, ಬೆಂಗಳೂರು ದಕ್ಷಿಣ ಸಕಾಲವರದಲ್ಲಿ ನಿರ್ಮಿಸಿರುವ ನಿಮ್ಹಾನ್ಸ್ ಹೆಲ್ತ್ ಕೇರ್ ಕೇಂದ್ರ ಪ್ರದೇಶವನ್ನು ಕಾರ್ಯನಿರ್ವಾಹಕ ಅಭಿಯಂತರರು (ದ) ಇವರು ಪರಿವೀಕ್ಷಿಸಿ, ದಕ್ಷಿಣ ಬೆಂಗಳೂರು ಸಕಾಲವರನಲ್ಲಿರುವ ನಿಮ್ಹಾನ್ಸ್‌ನ ಹೆಲ್ತ್‌ಕೇರ್ ಕೇಂದ್ರಕ್ಕೆ, ಸೂರ್ಯ ಸಿಟಿ ಹಾಗೂ ಆನೇಕಲ್ ಪಟ್ಟಣಕ್ಕೆ ನೀರು ಸರಬರಾಜು ಮಾಡುವ 700 ಎಂ.ಎಂ. ವ್ಯಾಸದ ಎಂ.ಎಸ್. ಕೊಳವೆ ಮಾರ್ಗದಿಂದ ಹೊಸದಾಗಿ 200 ಎಂ.ಎಂ. ವ್ಯಾಸದ ಕೊಳವೆ ಮಾರ್ಗ (ಸುಮಾರು 2.80 ಕಿಲೋ ಮೀಟರ್) ಅಳವಡಿಸಿ, ಪ್ರಸ್ತುತ ಪ್ರತಿದಿನ 50,000 ಲೀಟರ್ ನಷ್ಟು ಹಾಗೂ ಕಾವೇರಿ 5ನೇ ಹಂತದ ಕಾಮಗಾರಿಯು ಪೂರ್ಣಗೊಂಡ ನಂತರ ಅವಶ್ಯಕತೆಗೆ ಅನುಗುಣವಾಗಿ ಕಾವೇರಿ ನೀರು ಸರಬರಾಜು ಮಾಡಬಹುದೆಂದು ತಿಳಿಸಿರುತ್ತಾರೆ.

ಆದ್ದರಿಂದ, ಬೆಂಗಳೂರು ದಕ್ಷಿಣ ಸಕಾಲವರದಲ್ಲಿ ನಿರ್ಮಿಸಿರುವ ನಿಮ್ಹಾನ್ಸ್ ಹೆಲ್ತ್ ಕೇರ್ ಕೇಂದ್ರಕ್ಕೆ, ಪ್ರತ್ಯೇಕವಾಗಿ 200 ಎಂ.ಎಂ. ವ್ಯಾಸದ ಕೊಳವೆ ಮಾರ್ಗವನ್ನು ಸುಮಾರು 2.8 ಕಿಲೋ ಮೀಟರ್ ಉದ್ದದಷ್ಟು ಬನ್ನೇರುಘಟ್ಟ ರಸ್ತೆಯಿಂದ ಸದರಿ ಪ್ರದೇಶದವರೆಗೆ ಅಳವಡಿಸಿ ಹಂತ ಹಂತವಾಗಿ 50,000 ಲೀಟರ್ ರಿಂದ 2.40 ಲಕ್ಷ ಲೀಟರ್ ರವರೆಗೆ ನೀರನ್ನು ಸರಬರಾಜು ಮಾಡಲು ಹಾಗೂ ಸದರಿ ಕಾಮಗಾರಿಗೆ ತಗಲುವ ವೆಚ್ಚವನ್ನು ಸಂಸ್ಥೆಯ ವತಿಯಿಂದ ಭರಿಸುವ ಷರತ್ತಿಗೊಳಪಟ್ಟು ಸರ್ಕಾರದ ಅನುಮೋದನೆ ನೀಡುವಂತೆ ಅಧ್ಯಕ್ಷರು, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಇವರು ಕೋರಿರುತ್ತಾರೆ.

...2)

Scanned with CamScanner

ಮೇಲ್ಕಂಡ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ನಅಇ 117 ಎಂಎನ್‌ಐ 2020,**
**ಬೆಂಗಳೂರು, ದಿನಾಂಕ: 13.01.2021**

ಪ್ರಸ್ತಾವನೆಯಲ್ಲಿ ವಿವರಿಸಲಾಗಿರುವ ಅಂಶಗಳ ಹಿನ್ನೆಲೆಯಲ್ಲಿ, ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರವಿಜ್ಞಾನ ಸಂಸ್ಥೆ (ನಿಮ್ಹಾನ್ಸ್)ನ ಸಂಸ್ಥೆಯು ಬೆಂಗಳೂರು ದಕ್ಷಿಣ ಸಕಾಲವರದಲ್ಲಿ ನಿರ್ಮಿಸಿರುವ ನಿಮ್ಹಾನ್ಸ್ ಹೆಲ್ತ್ ಕೇರ್ ಕೇಂದ್ರಕ್ಕೆ, ಪ್ರತ್ಯೇಕವಾಗಿ 200 ಎಂ.ಎಂ. ವ್ಯಾಸದ ಕೊಳವೆ ಮಾರ್ಗವನ್ನು ಸುಮಾರು 2.8 ಕಿಲೋ ಮೀಟರ್ ಉದ್ದದಷ್ಟು ಬನ್ನೇರುಘಟ್ಟ ರಸ್ತೆಯಿಂದ ನಿಮ್ಹಾನ್ಸ್ ಹೆಲ್ತ್ ಕೇರ್ ಕೇಂದ್ರದ ಪ್ರದೇಶದವರೆಗೆ ಅಳವಡಿಸಿ, ಹಂತ ಹಂತವಾಗಿ ಪ್ರತಿದಿನ 50,000 ಲೀಟರ್ ರಿಂದ 2.40 ಲಕ್ಷ ಲೀಟರ್‌ವರೆಗೆ ನೀರನ್ನು ಬೆಂಗಳೂರು ಜಲಮಂಡಳಿಯಿಂದ ಸರಬರಾಜು ಮಾಡಲು ಹಾಗೂ ಸದರಿ ಕಾಮಗಾರಿಗೆ ತಗಲುವ ವೆಚ್ಚವನ್ನು ನಿಮ್ಹಾನ್ಸ್ ಸಂಸ್ಥೆಯ ವತಿಯಿಂದ ಭರಿಸುವ ಷರತ್ತಿಗೊಳಪಟ್ಟು ಸರ್ಕಾರದ ಅನುಮೋದನೆ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಕೆ.ಎಸ್. ಜಗದೀಶರೆಡ್ಡಿ)**
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

**ಇವರಿಗೆ:**

1. ಅಧ್ಯಕ್ಷರು, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಕಾವೇರಿ ಭವನ, ಬೆಂಗಳೂರು-560 009.
2. ನಿರ್ದೇಶಕರು, ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರವಿಜ್ಞಾನ ಸಂಸ್ಥೆ (ನಿಮ್ಹಾನ್ಸ್), ಬೆಂಗಳೂರು-560 029.
3. ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ ವಿಕಾಸ ಸೌಧ, ಬೆಂಗಳೂರು.
5. ಶಾಖಾ ರಕ್ಷ ಕಡತ/ಹೆಚ್ಚುವರಿ ಪ್ರತಿಗಳು.

Scanned with CamScanner